# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 30-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಪಾಮೆಣ್ಣೆ, ಸೋಯಾಬೀನ್ ಎಣ್ಣೆ ಫ್ಯೂಚರ್ ದರ ಇಳಿಕೆ

ಮಾರಾಟದ ಒತ್ತಡ, ಸೋಯಾಬೀನ್ ಎಣ್ಣೆಯ ಫ್ಯೂಚರ್ ದರ ಇಳಿಕೆಯಿಂದ ಪಾಮೆಣ್ಣೆ ಫ್ಯೂಚರ್ ದರ ಇಳಿಕೆಯಾಗಿದೆ. ಯುಕ್ರೈನ್ ವಲಯದ ರಫ್ತು ಪುನರಾರಂಭಕ್ಕೆ ಯುರೋಪ್ ಮತ್ತು ಅಮೇರಿಕಾ ದೇಶಗಳು ಪ್ರಯತ್ನಿಸುತ್ತಿರುವ ವರದಿಗಳಿಂದ ಸೋಯಾಬೀನ್ ಎಣ್ಣೆ ಫ್ಯೂಚರ್ ದರ 3.1 ಶೇಕಡಾ ಇಳಿಕೆಯಾಯಿತು. ವ್ಯಾಪಾರಿಗಳು ಜೂನ್ ಕಚ್ಚಾ ಪಾಮೆಣ್ಣೆ ರಫ್ತು ತೆರಿಗೆಯ ಪ್ರಕಟಣೆ ಹಾಗೂ ಇಂಡೋನೇಶಿಯಾದ ರಫ್ತು ನಿರ್ಬಂಧ ತೆರವಿಗೆ ಕಾಯುತ್ತಿದ್ದು, ಮಾರಾಟದ ಒತ್ತಡದಿಂದಾಗಿ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 0.73 ಶೇಕಡಾ ಇಳಿಕೆಯಾಗಿದೆ.

## 2021–22 ಕರ್ನಾಟಕದ ಜೋಳ ಉತ್ಪಾದನೆ 16 ಶೇಕಡಾ ಇಳಿಕೆ

2021 ಜುಲೈಯಿಂದ 2022 ಜೂನ್ ತನಕ ಅವಧಿಯಲ್ಲಿ ಕರ್ನಾಟಕದ ಜೋಳ ಉತ್ಪಾದನೆ ಹಿಂದಿನ ವರ್ಷದ ಇದೇ ಅವಧಿಗಿಂತ 16 ಶೇಕಡಾ ಇಳಿಕೆಯಾಗಿ 5.3 ಮಿಲಿಯನ್ ಟನ್‌ಗಳಾಗಬಹುದೆಂದು ಮುಂಚಿತ ಅಂದಾಜಿನಲ್ಲಿ ಹೇಳಲಾಗಿದೆ. ಹೆಚ್ಚಿದ ಹವಾಮಾನ ವೈಪರೀತ್ಯ, ನೆರೆ ಮುಂತಾದ ಕಾರಣಗಳಿಂದ ಜೋಳ ಹಾಗೂ ಇತರ ಹೆಚ್ಚಿನ ಬೆಳೆಗಳು ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ.

## ರಫ್ತು ಬೇಡಿಕೆ ಹೆಚ್ಚಳದಿಂದ ಬಾಸ್ಮತಿ ಅಕ್ಕಿ ದರ ಹೆಚ್ಚಳ

ಮಧ್ಯ ಪೂರ್ವ ರಾಷ್ಟ್ರಗಳಿಂದ ರಫ್ತು ಬೇಡಿಕೆ ಹೆಚ್ಚಳದಿಂದ ಬಾಸ್ಮತಿ ಅಕ್ಕಿ ದರ ಹೆಚ್ಚಳವಾಗಿದೆ. ಕಳೆದೆರಡು ವಾರಗಳಿಂದ ದೇಶೀ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ 15 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಮುಂದಿನ ಬೆಳೆಯ ಆವಕ ಮುಂದಿನ ಅಕ್ಟೋಬರ್,ನವೆಂಬರ್‌ನಲ್ಲಿ ಮಾರುಕಟ್ಟೆಗೆ ಬರುವಲ್ಲಿ ತನಕ ದರ ಹೆಚ್ಚಳದಲ್ಲಿರುವ ಸಾಧ್ಯತೆಯಿದೆಯೆನ್ನಲಾಗಿದೆ.

## ಅಮೇರಿಕಾ ಜೋಳ ಫ್ಯೂಚರ್ ದರ ಇಳಿಕೆ

ಅರ್ಜೆಂಟಿನಾ ರಫ್ತು ಗಾತ್ರ ಹೆಚ್ಚಳಗೊಳಿಸುವ ವರದಿ ಹಾಗೂ ಅಮೇರಿಕಾದಲ್ಲಿ ಜೋಳ। ಬಿತ್ತನೆ ಹೆಚ್ಚಳವಾಗುತ್ತಿರುವ ವರದಿಗಳ ಹಿನ್ನಲೆಯಲ್ಲಿ ಅಮೇರಿಕಾ ಜೋಳ ಫ್ಯೂಚರ್ ದರ ಇಳಿಕೆಯಾಗುತ್ತಿದೆ. ಕೆನ್ಯಾ ದೇಶವು 540,000 ಟನ್ ಜೋಳ ಆಮದು ಮಾಡಲಿದೆಯೆನ್ನಲಾಗಿದೆ. ಬೇಡಿಕೆ ಉತ್ತಮವಿದ್ದು ದರ ಹೆಚ್ಚಳದಲ್ಲಿ ಸಾಧ್ಯತೆಯಿದೆ.